ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು
ಸಂಚಾರ (ವಾಣಿಜ್ಯ) ಇಲಾಖೆ

ಸಂ.ಕರಾಸಾ:ಕೇಕ:ಸಂ:ವಾ/ 3918 / 2017-18 ದಿನಾಂಕ: 16.09.2017

ಸುತ್ತೋಲೆ ಸಂಖ್ಯೆ: 1403 /2017

(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)

ವಿಷಯ: ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳು / ವಾಣಿಜ್ಯ ಸ್ಥಳ/ ಸ್ವಚ್ಛತಾ ನಿರ್ವಹಣೆ ಮತ್ತು ಇತರೆ ಉದ್ದೇಶಗಳಿಗಾಗಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಕುರಿತು.

ಉಲ್ಲೇಖ: 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:787/2017, ದಿನಾಂಕ 26-07-2017,
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:788/2017, ದಿನಾಂಕ 26-07-2017,
3. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:603, ದಿನಾಂಕ 13-06-2008,
4. ಸುತ್ತೋಲೆ ಸಂಖ್ಯೆ:ಆಇ 165 ವೆಚ್ಚ-12/2017, ದಿನಾಂಕ 21-03-2017,
5. ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 539 ವೆಚ್ಚ-12/2017, ದಿನಾಂಕ 02-06-2017,
6. No. CEG/04/EPP/2008, Dtd 14-08-2017.

* * *

ಕ.ರಾ.ರ.ಸಾ. ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳು / ವಾಣಿಜ್ಯ ಸ್ಥಳ/ ಜಾಹೀರಾತು ಪ್ರದರ್ಶನ / ಸ್ವಚ್ಛತಾ ನಿರ್ವಹಣೆ ಮತ್ತು ಇತರೆ ಉದ್ದೇಶಗಳಿಗಾಗಿ ಕೇಂದ್ರ ಕಛೇರಿ ಮತ್ತು ವಿಭಾಗದ ಸಂಚಾರ ವಾಣಿಜ್ಯ ಇಲಾಖೆಗಳಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಮೂಲಕ ಪರವಾನಗಿದಾರರನ್ನು / ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳುತ್ತಿದೆ.

ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ರವರು ಇ.ಟೆಂಡರ್‌ನಲ್ಲಿ ಬಿಡ್ಡುದಾರರುಗಳು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸುವ ದರಗಳನ್ನು ಮಾತ್ರ ಪರಿಗಣಿಸುವಂತೆ ಹಾಗೂ ಟೆಂಡರ್ ದಾಖಲಾತಿಗಳೊಂದಿಗೆ ಇನ್ನಾವುದೇ ಅನುಬಂಧಗಳು, ನಮೂನೆಗಳು ಮತ್ತು ಇತರೆ ಮಾಧ್ಯಮದ ಮೂಲಕ ಸಲ್ಲಿಸುವ ದರಗಳನ್ನು ಪರಿಗಣಿಸತಕ್ಕದ್ದಲ್ಲವೆಂದು ಉಲ್ಲೇಖ-4 ಮತ್ತು 5 ರಲ್ಲಿ ತಿಳಿಸಿರುತ್ತಾರೆಂದು. ಅದರಂತೆ ಕ್ರಮ ಕೈಗೊಳ್ಳುವಂತೆ ಇ.ಆಡಳಿತ ಇಲಾಖೆ ರವರು ಉಲ್ಲೇಖ-06 ರ ಪತ್ರದಲ್ಲಿ ನಿರ್ದೇಶನ ನೀಡಿರುತ್ತಾರೆ. ಆದುದರಿಂದ ಸದರಿ ವಿಷಯದ ಕುರಿತಂತೆ ಕೆಳಕಂಡಂತೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

. . . 2

1) ಕೇಂದ್ರ ಕಛೇರಿ ಮತ್ತು ವಿಭಾಗದ ವ್ಯಾಪ್ತಿಯಲ್ಲಿ ಆಹ್ವಾನಿಸಲಾಗುವ ಇ.ಟೆಂಡರ್‌ಗಳಲ್ಲಿ ಬಿಡ್ಡುದಾರರು ಇ.ಪೋರ್ಟಲ್‌ನಲ್ಲಿ ನಮೂದಿಸುವ ದರಗಳನ್ನು ಮಾತ್ರ ಪರಿಗಣಿಸುವುದು.

2) ಟೆಂಡರ್ ದಾಖಲಾತಿಗಳೊಂದಿಗಿನ ಇನ್ನಾವುದೇ ಅನುಬಂಧಗಳು, ನಮೂನೆಗಳು ಮತ್ತು ಇತರೆ ಮಾಧ್ಯಮದ ಮೂಲಕ ಆರ್ಥಿಕ ಬಿಡ್ ಕುರಿತು ಬಿಡ್ಡುದಾರರು ಸಲ್ಲಿಸುವ ದರಗಳನ್ನು ಪರಿಗಣಿಸಬಾರದು.

3) ನಿಗಮದ ವತಿಯಿಂದ ಇ.ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡುವ ಷರತ್ತು ಮತ್ತು ನಿಬಂಧನೆಗಳಲ್ಲಿ ಬಿಡ್ಡುದಾರರು ನಮೂದಿಸಬೇಕಾದ ದರಗಳು / ಮೊತ್ತದ ಬಗ್ಗೆ ಉದಾಹರಣೆ ಸಹಿತವಾಗಿ ವಿವರಿಸಿ ಗೊಂದಲಕ್ಕೆ ಆಸ್ಪದ ನೀಡದಂತೆ ಕ್ರಮ ಕೈಗೊಳ್ಳುವುದು.

ಈ ಸುತ್ತೋಲೆಯನ್ನು ಸ್ವೀಕರಿಸಿ, ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ಕಳುಹಿಸುವುದು.

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ)

ಪ್ರತಿಯನ್ನು :

1) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಹಸಾಸಂಸ್ಥೆ, ಬೆಂಗಳೂರು / ವಾಕರಸಾಸಂಸ್ಥೆ, ಹುಬ್ಬಳ್ಳಿ / ಈಕರಸಾಸಂಸ್ಥೆ ಗುಲ್ಬರ್ಗಾ, ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.
3) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಅಧ್ಯಕ್ಷರು / ಉಪಾಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಸಿ & ಪ) / (ಭ & ಜಾ) ರವರ ಹಿರಿಯ / ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.